ಸಾರು, ತೊಗರಿ ಬೇಳೆ, ಚಟ್ನಿ ಚೆನ್ನಾಗಿದೆ. ಮಂಡಗದ್ದೇಲಿ ನಾನು ಕ್ಲಾಸಿಗೆ ಹೋಗುವಾಗ ಅಮ್ಮ ಅಷ್ಟು ಕೈತುತ್ತು ಹಾಕ್ತಿದ್ಲು ಎಂದ.

ನಾಳೆ ಏನಡಿಗೆ? ತಿಂಡಿಗೆ ಉಪ್ಪಿಟ್ಟಾದ್ರೆ ಚೆನ್ನಾಗಿರುತ್ತೆ... ಎಂದ. ಆಕೆ ಯಾವುದೋ ಪಾತ್ರೆಗೆ ನೀರು ಹಾಕಿ ಚೆಲ್ಲಿದಳು. ಆಕೆ ಊಟಕ್ಕೆ ಕೂತಳು. ಬಡಿಸ್ಲ ಎಂದು ಕೇಳಿದ. ನೆತ್ತಿಗೆ ಹತ್ತಿ ಕೆಮ್ಮ ತೊಡಗಿದಳು. ನೆತ್ತಿ ತಟ್ಟಲು ಮುಂದಾದ. ಆಕೆ ಮೇಲೆ ನೋಡಿದಳು. ನೀರು ಕುಡಿದಳು. ಕಣ್ಣಲ್ಲಿ ನೀರು ತುಂಬಿತ್ತು.

ಈಗ ಆಕೆ ಪಾತ್ರೆ ತಿಕ್ಕುತ್ತಿದ್ದಳು. ಹೋಗುವ ಮೊದಲು ಆಕೆಯ ಹೆಸರಾದರೂ ತಿಳಿದರೆ ಸಾಕು ಎಂದುಕೊಂಡು ಬಚ್ಚಲಿಗೆ ಬಂದ. ಆಕೆ ಬೆನ್ನು ಹಾಕಿ ಕುಕ್ಕುರು ಕೂತು ಪಾತ್ರೆ ತಿಕ್ಕುತ್ತಿದ್ದಳು.

ಹೆಸರೇನು? ಎಂದ. ಆಕೆ ತಿರುಗಿದಳು. ಕೆನ್ನೆ ಮೇಲೆ ಮಸಿ ಹತ್ತಿತ್ತು. ನೋಡಿದ್ದೆ ನಗು ಬಂದು ನಿಂಗೆ ಮೀಸೆ ಬಂದಿದೆ ಎಂದ. ಆಕೆ ದಿಕ್ಕೆಂದು ಎದ್ದು ಎರಡೂ ಕೈಯಿಂದ ಅವನ ಕೆನ್ನೆಗೆ ಮಸಿ ಬಳಿದಳು. ಮೂಲೆಯಲ್ಲಿದ್ದ ಬಚ್ಚಲು ಮನೆ ಕನ್ನಡಿಗೆ ಹೊಗೆ ಹಿಡಿದು ಕಂದಾಗಿತ್ತು. ಅಲ್ಲಿ ಮಸಿ ಮಸಿ ಮುಖ ಕಡೆಗೂ ಕಾಣಿಸಿತು. ಅವಳ ಸೂಕ್ಷ್ಮ ಪಂಚತನ ಎಲ್ಲ ಚರ್ಮದಿಂದ ರಕ್ತಕ್ಕಿಳಿಯತೊಡಗಿ ಈ ವರೆಗಿನ ಆಟಕ್ಕೊಂದು ಹೊಸ ರಂಗು ಬಂದಿತು.

ಹಾಸಿಗೆ ಹಾಕಿದ ಸದ್ದು. ಆಕೆ ಹಾಲ್‌ನಲ್ಲಿ ಈತ ರೂಂನಲ್ಲಿ. ಮುಂದುಗಡೆ ಅಗಳಿ ಹಾಕಿದ ಸದ್ದು. ಲೈಟ್ ಆರಿಸಿದ ಸದ್ದು. ಆ... ಎಂದು ಆಕಳಿಸಿದ. ನಿದ್ರೆ ಜೊಂಪೆ ಜೊಂಪೆಯಾಗಿ ರೆಪ್ಪೆಮೇಲೆ ಬಂದು ಕುಳಿತಿತು. ನೂರಾರು ನಿದ್ರೆಯ ಚಿಟ್ಟೆಗಳು ರೆಪ್ಪೆಯಮೇಲೆ ಸವಾರಿ ಮಾಡತೊಡಗಿದವು. ಉಸಿರು ಭಾರವಾಗಿ, ದೇಹ ನಿಧಾನವಾಗಿ ಜಡವಾಗತೊಡಗಿತು.

ರಾತ್ರಿ ನೀರು ಕುಡಿಯಲು ಅಡುಗೆ ಮನೆಗೆ ನುಗ್ಗಿದ. ಲೈಟ್ ಹಾಕಲು ತಡವರಿಸಿದ. ನೀರಿನ ಕೊಡ ಎಡವಿದ. ಅದು ಉರುಳಿ ಎಲ್ಲ ಕಡೆ ನೀರು ಆವರಿಸಿತು. ಆಕೆ ಬಂದು ಲೈಟ್ ಹಾಕಿದ ಕೂಡಲೇ ಸಿಕ್ಕಿ ಬಿದ್ದಂತಾಗಿ, ಈ ಹಳ್ಳ ಮಾಡಿದ ತಪ್ಪು ಅದರೊಳಗೆ ಸೇರಿ, ಬೇಗ ಬೇಗ ಓಡಲು ನುಗ್ಗಿ – ಮುಗ್ಗರಿಸಿದ. ಕಾಲಿಗೆ ಉಂಟಾದ ಪೆಟ್ಟು, ನೋವು ದೇಹವನ್ನಾವರಿಸತೊಡಗಿತು. ಎದ್ದು ನಿಂತ ಮತ್ತೆ ಜಾರುವುದರಲ್ಲಿದ್ದವನನ್ನ ಆಕೆ ಆಧರಿಸಿ ಹಿಡಿದಳು. ಕೈ ತರಚಿ ರಕ್ತ ಹರಿಯುತ್ತಿತ್ತು ಅದನ್ನ ಒತ್ತಿ ಹಿಡಿದಳು. ಅದಕ್ಕೆ ಕಾಫಿ ಪುಡಿ ಹಾಕಿ ಒತ್ತಿದಳು. ನಿಧಾನಕ್ಕೆ ಕುಂಟುವ ಅವನ ಹೆಜ್ಜೆಗಳನ್ನೆಣಿಸುತ್ತಾ ಆಕೆ ಹಾಸಿಗೆಗೆ ಕರೆತಂದಳು.

ದಿನಗಳು, ರಾತ್ರಿಗಳು ಬಂದವು ಹೋದವು. ಈ ಶಾಮಸುಂದರಾಯರ ಮನೆಯಲ್ಲಿ ಕಾವಲುಗಾರಿಕೆ ನಡೆಯಿತು.

ರಂಗಣ್ಣ ಬರುವುದರೊಳಗೆ ಈ ಮನೆ ಖಾಲಿಮಾಡುವ ಕಾಲ ಸನ್ನಿಹಿತವಾಯ್ತು.

ಆತ–ಆಕೆ ಬಾಗಿಲಿಕ್ಕಿ ಬೀದಿಗಿಳಿದರು.


**ಎಸ್. ಶೇಷಾದ್ರಿ ಕಿನಾರ**

ಶಿವಮೊಗ್ಗ ಜಿಲ್ಲೆಯ ಮಂಡಗದ್ದೆ ಹುಟ್ಟಿದ ಊರು. 'ಭೇದ', 'ಕಂಡ ಜಗತ್ತು', 'ಅವತಾರ' ಕಥಾಸಂಕಲನಗಳು ಪ್ರಕಟವಾಗಿವೆ. 'ಕೃಷ್ಣ ಕವನಗಳು', 'ಸೂರ್ಯ ಕವನಗಳು' ಮತ್ತು ಲಲಿತ ಪ್ರಬಂಧಗಳು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶಿವಮೊಗ್ಗದ ಪ್ರಾಥಮಿಕ ಶಿಕ್ಷಕಿಯರ ತರಬೇತಿ ಕೇಂದ್ರ, ಮಕ್ಕಳ ವಿದ್ಯಾಸಂಸ್ಥೆಯ ಕಚೇರಿ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರು. ಶಿವಮೊಗ್ಗದಲ್ಲಿ ವಾಸವಾಗಿದ್ದಾರೆ.